'ಛೇ..ಛೇ... ದಿಲ್ಲಿಯವಳು ಅಂತ ತೋರಿಸಿಬಿಟ್ಯಲ್ಲಾ... ವೇದ ಪಾರಾಂಗತ, ಕಂಡ ಕಂಡ ಹೋಟೆಲ್‌ನಲ್ಲಿ ಕಾಫಿ ಕುಡಿತಾನಾ? ಇವಳು ಹೇಳೋದೆಲ್ಲಾ ದಿಲ್ಲಿಯಲ್ಲಿ ನಡೆಯುತ್ತೆ. ನನ್ನ ಊರಿನ ವೈದಿಕರ ಬಗ್ಗೆ ನನಗೆ ಗೊತ್ತುಕಣೇ. ಹಾಲಿಗೆ ದೋಷವಿಲ್ಲ ಕುಡಿತೀಯಾ?'

'ಬೇಡ.' – ರಾಜಪ್ಪನ ದನಿ ಕ್ಷೀಣವಾಗಿ ಕೇಳಿಸಿತು.

'ನೋಡಿದೆಯೇನೆ? ಹಾಲು ಸಹಾ ಕುಡಿಯಲ್ಲ ಅಂತಾನೆ. ಆ ಕಾಲದ ರಾಜಪ್ಪನೇ ಇವನು ಅಂತ ಅನಿಸ್ತಾ ಇದೆ. ವೇದ ಪಠಣ ಮಾಡಿದಕೂಡಲೆ ಎಷ್ಟೊಂದು ಕಟ್ಟುನಿಟ್ಟು ಬಂದುಬಿಡುತ್ತೆ ನೋಡು? ರಾಜಪ್ಪ ನಿನ್ನಂಥ ವೇದಪಾರಾಂಗತರನ್ನ ನೋಡಿದ್ರೆ ಕಾಲಿಗೆ ಎರಗಿ ನಮಸ್ಕಾರ ಮಾಡಬೇಕಂತನಿಸುತ್ತೆ ಕಣೋ. ಸತ್ಯವಾಗಿ ಹೇಳ್ತೀನಿ, ಸಂಸ್ಕೃತ ಮಂತ್ರಗಳನ್ನು ಕಲಿತವರಿಂದ ಹೇಳಿಸಿ ಕೇಳಬೇಕು ಅಂತ ನನಗೆ ಬಹಳ ಆಸೆ. ದಿಲ್ಲಿಯಲ್ಲಿ ಒಂದು ಶಾಲೆಯಲ್ಲಿ ಒಬ್ಬ ಸಂಸ್ಕೃತ ಮೇಷ್ಟ್ರು ಇದ್ದಾರೆ. ನಮ್ಮವರು. ಶ್ರೀನಿವಾಸ ವರದಾ ಅಂತ ಹೆಸರು. ಮಂತ್ರ ಹೇಳಿದ್ರೆ ಗಂಟೆ ಬಾರಿಸಿದ ಹಾಗೆ ಇರುತ್ತೆ. ಅವರನ್ನ ಆಗಾಗ ಮನೆಗೆ ಕರೆಸಿ ಪುರುಷ ಸೂಕ್ತ ಹೇಳಿಸಿ ಕೇಳ್ತೀನಿ. ಒಂದು ಸಲ ಹೇಳಿದರೆ ಹತ್ತು ರೂಪಾಯಿ ದಕ್ಷಿಣೆ. ಊಟ. ನ್ಯಾಯವಾಗಿ ನೋಡಿದರೆ ಅವರಿಗೆ ಕನಕಾಭಿಷೇಕ ಮಾಡಬಹುದು. ಆದರೆ ನನ್ನಿಂದ ಆಗೋದು ಇಷ್ಟೇ. ಉದ್ಯೋಗಕ್ಕಾಗಿ ಬಹಳಷ್ಟು ತಪ್ಪು ಕೆಲಸ ಮಾಡ್ತೀವಿ. ನಾವಂತೂ ಎಷ್ಟು ತಪ್ಪು ಕೆಲಸ ಮಾಡ್ತೀವಿ. ಅದೂ ನನ್ನಂತಹ ಕೆಲಸದಲ್ಲಿ ಇರೋವನಿಗೆ ಕೇಳಬೇಕೆ. ಅದಕ್ಕೆ ನಿನ್ನಂತೆ ವೇದ ಕಲಿತವರನ್ನ ಕರೆಸಿ ಗೌರವಿಸೋದು ಒಂದು ಬಗೆಯ ಪ್ರಾಯಶ್ಚಿತ್ತ ಅಂತ ಅಂದುಕೋ.'

'ಬಿಡುವಿಲ್ಲದೆ ನೀವೇ ಮಾತಾಡ್ತಾ ಇದ್ದೀರಲ್ಲ. ಅವರನ್ನೂ ಸ್ವಲ್ಪ ಮಾತನಾಡೋದಿಕ್ಕೆ ಬಿಡಿ...' ಎಂದಳು ಸರೋಜ.

'ಹೌದಹುದು, ಮಾತನಾಡೋದಿಕ್ಕೆ ಶುರುಮಾಡಿದರೆ ನಿಲ್ಲಿಸೋದಿಲ್ಲ. ನನ್ನ ಉದ್ಯೋಗ ಅಂತದ್ದು. ನೀನು ಸ್ವಲ್ಪ ಸಾಮ ವೇದದ ಬಗ್ಗೆ ಹೇಳು. ಕೇಳಬೇಕಂತ ಬಹಳ ಆಸೆ ಆಗ್ತಾ ಇದೆ.'

'ನನ್ನನ್ನ ದಿಲ್ಲಿಯವಳು ಅಂತ ಹೇಳಿ ಈಗ ನೀವು ಅವರನ್ನ ಹೀಗೆ ಕೇಳೋದು ಚೆನ್ನಾಗಿದೆಯೇ? ವೇದ ಹೇಳೋದಿಕ್ಕೆ ಹೊತ್ತು ಗೊತ್ತು ಇಲ್ಲವೇನು?' ಎಂದಳು ಸರೋಜ.

'ನನಗೆ ಇರೋ ಆತಂಕದಲ್ಲಿ ಬಡಬಡಾಯಿಸ್ತಾನೆ ಇದ್ದೀನಿ. ನೀನು ಹೇಳೋದೂ ಸರಿಯೇ, ಸರೋಜ. ರಾಜಪ್ಪ ಎದ್ದೇಳು, ನಿಮ್ಮ ಮನೆಗೆ ಹೋಗೋಣ. ನಿನ್ನ ಹೆಂಡತಿ ಮಕ್ಕಳನ್ನೆಲ್ಲಾ ನೋಡಬೇಕು ಅಂತನಿಸ್ತಾ ಇದೆ. ನಮಗೆ ಈವತ್ತು ನಿಮ್ಮ ಮನೆಯಲ್ಲೇ ಊಟ. ತಗೋ, ಹಣ್ಣಾದರೂ ತಿನ್ನು. ಕಾಫಿಯನ್ನೋ, ಹಾಲನ್ನೋ ಮುಟ್ಟೋದಿಲ್ಲಾ ಅಂತೀಯಾ.'

'ಇದ್ದಕ್ಕಿದ್ದಂತೆ ನಿಮ್ಮ ಮನೆಗೆ ಊಟಕ್ಕೆ ಬರ್ತೀನಿ ಅಂದ್ರೆ ಹೇಗೆ? ಪಾಪ, ಅವರ ಹೆಂಡ್ತಿ ಏನ್ಮಾಡ್ತಾರೆ? ಮನೆಯಲ್ಲಿ ಅನುಕೂಲ ಹೇಗೋ? ಏನೂ ಗೊತ್ತಿಲ್ಲದೆ ಹೀಗೆ ಮಾತಾಡಿದರೆ...' ಎಂದಳು ಸರೋಜ.

'ಇದು ದಿಲ್ಲಿ ಅಲ್ಲಾ ಕಣೇ, ತಿಳ್ಕೋ! ದಿಲ್ಲಿಯಲ್ಲೇ ಒಬ್ಬರಿಗೆ ಅಡಿಗೆ ಅಂದ್ರೂ ಅರ್ಧ ಹೊಟ್ಟೆ ಊಟಾನೇ. ಇಲ್ಲೆಲ್ಲಾ ಹೆಚ್ಚಾಗಿ ಇಬ್ರು ಊಟಾ ಮಾಡೋ ಅಷ್ಟು ಅಡಿಗೆ ಮಾಡಿಟ್ಟಿರ್ತಾರೆ. ನನ್ನ ಊರಿನ ಬಗ್ಗೆ ನನಗೆ ಗೊತ್ತಿಲ್ವಾ? ನಿನ್ನನ್ನ ಯಾಕೆ ಕರೆದುಕೊಂಡು ಬಂದೆ ಗೊತ್ತಾ? ನನ್ನ ಊರಿನ ಹಿರಿಮೆಯನ್ನ ತೋರಿಸಲಿಕ್ಕೆ. ಚಿಕ್ಕ ವಯಸ್ಸಲ್ಲಿ ಇವರ ಮನೆಯಲ್ಲಿ ಎಷ್ಟು ಸಲ ಊಟ ಮಾಡಿದ್ದೀನಿ ಗೊತ್ತಾ? ಇವನ ಅಮ್ಮ ಒಂದು ಉಪ್ಪಿನಕಾಯಿ ಮಾಡೋರು, ಅದಕ್ಕೆ ಹೆಸರೇನೋ ರಾಜಪ್ಪ? ಯೆಸ್. ಮಾಕಾಳಿಗೆಣಸು. ಹೇನಿನ ವಾಸನೆ ಇರೋದಲ್ಲಾ. ಬಾಯ್ಗೆ ಹಾಕಿದರೆ ಎಷ್ಟು ರುಚಿಯಾಗಿರೋದು ಗೊತ್ತೇ? ನಿನ್ನ ಅಪ್ಪ ಒಳ್ಳೆಯ ಭೋಜನ ಪ್ರಿಯರು. ಭಕ್ತರು ಅಂತಲೇ ಹೇಳಬಹುದು. ಅಲ್ವೇನೋ?'

ಅಪ್ಪ ಭೋಜನ ಭಕ್ತರೇ. ಅಜ್ಜ ಕೊಟ್ಟುಹೋದ ಭೂಮಿಯನ್ನೆಲ್ಲಾ ತಿಂದು ತೇಗಿಬಿಟ್ಟ. ಇವನು, ಊಟ ಬಯಸಿ ಮನೆಗೆ ಬರುತ್ತೇನೆ ಎನ್ನುತ್ತಾನಲ್ಲಾ, ಈ ಪರಿಸ್ಥಿತಿಯನ್ನು ಹೇಗೆ ಸಂಬಾಳಿಸುವುದು? ಈ